Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



Volume 39 | Issue - 26 | 19th December 2024

## 12–12–2024ರ ಗವರ್ನರ್ ಭೇಟಿ ಕಾರ್ಯಕ್ರಮದ ವಿಶ್ಲೇಷಣೆ

Time : 7.00 p.m.


Venue : Hotel Shivaprasad Grand, Kundapura

**39th year of Service and Fellowship**

THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

# Dist. Gov. Rtn. PHF. ದೇವ್ ಆನಂದ್‌ರವರ ಅಧಿಕೃತ ಭೇಟಿಯ ವರದಿ




ಸಂಜೆ 7.00 ಘಂಟೆಗೆ ಸರಿಯಾಗಿ ನಮ್ಮ ಸಾರ್ವಜನಿಕ ಸಭೆಯನ್ನು ಕೋಣಿ ರಸ್ತೆಯಲ್ಲಿರುವ CPC ಕಟ್ಟಡದಲ್ಲಿರುವ AC ಸಭಾಂಗಣದಲ್ಲಿ ಅದ್ದೂರಿಯಾಗಿ ನಡೆಸಲಾಯಿತು. ರೊ. ಜಿ. ಸಂತೋಷ್ ಕುಮಾರ್ ಶೆಟ್ಟಿಯವರು ಅಧ್ಯಕ್ಷ ಕಾರ್ಯದರ್ಶಿಯೊಂದಿಗೆ Dist. Gov. Rtn. PHF. ದೇವ್ ಆನಂದ್, First Lady ಆ್ಯನ್ ರೇಖಾ ದೇವ್ ಆನಂದ್, Asst. Governor ರೊ. ಡಾ. ಬಿ. ಆರ್. ಶೆಟ್ಟಿ ಹಾಗೂ Zonal Lieutenant ರೊ. ಮಹೇಂದ್ರ ಶೆಟ್ಟಿಯವರನ್ನು ವೇದಿಕೆಯನ್ನು ಅಲಂಕರಿಸಲು ಆಹ್ವಾನಿಸಿದರು. ರೊ. ಶ್ರೀನಿವಾಸ ಶೇಟ್‌ರವರ ಮಧುರವಾದ ದೇವಸ್ತುತಿಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಆಗಮಿಸಿದ ಎಲ್ಲರನ್ನೂ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಈ ಸಾಲಿನ ಅರ್ಧ ವಾರ್ಷಿಕ ವರದಿಯನ್ನು ಸಭೆಗೆ ವಿವರವಾಗಿ ನೀಡಿದರು. ಉತ್ತಮ ಸಮಾಜ







ಸೇವಕರಾಗಿ ಕರ್ನಾಟಕ ಸರಕಾರದಿಂದ ಗುರುತಿಸಿ, 'ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ'ಗೆ ಭಾಜನರಾದ ನಮ್ಮ ಕ್ಲಬ್ಬಿನ ಹೆಮ್ಮೆಯ ಸದಸ್ಯರಾದ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರನ್ನು Dist. Governorರವರಿಂದ ಸನ್ಮಾನಿಸಲಾಯಿತು. ಹಾಗೆಯೇ ನಮ್ಮೂರಿನ ಪರಿಸರದಲ್ಲಿ ಸಮಾಜ ಸೇವಕರಾಗಿ ಸದ್ದಿಲ್ಲದೇ 200ಕ್ಕೂ ಅಧಿಕ ಕಾರ್ಯಕ್ರಮಗಳನ್ನು ಸ್ವಂತ ಖರ್ಚಿನಿಂದ ಮಾಡುತ್ತಿರುವ ಮತ್ತು ಸಾವಿರಾರು ಕಡಲಾಮೆಗಳನ್ನು ಸಂರಕ್ಷಿಸಿದ ಪ್ರಕೃತಿಪ್ರಿಯ ಶ್ರೀ ದಿನೇಶ್ ಸಾರಂಗ್‌ರವರ ಸಮಾಜ ಸೇವೆಯನ್ನು ಸಭೆಗೆ ಪರಿಚಯಿಸಿ, ಅತಿಥಿಗಳಿಂದ ಸನ್ಮಾನಿಸಲಾಯಿತು. ನಂತರ ನಮ್ಮೂರಿನ ಇನ್ನೊಂದು ಯುವ ಪ್ರತಿಭೆ ಕ್ರೀಡಾಪಟುವಾಗಿರುವ Weight Lifting ಮತ್ತು Power Liftingನಲ್ಲಿ ಈಗಾಗಲೇ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ 47 ಚಿನ್ನದ ಪ್ರಶಸ್ತಿಗಳನ್ನು ಗಳಿಸಿದ ನಾಗಶ್ರೀ ಗಣೇಶ್‌ರವರನ್ನು ಸಭೆಗೆ ಪರಿಚಯಿಸಿ ಅತಿಥಿಗಳಿಂದ ಸನ್ಮಾನಿಸಿ ಶುಭ ಕೋರಲಾಯಿತು. ಈ ಸಾಲಿನ ನಮ್ಮ ಕ್ಲಬ್ಬಿನ TRF ಚೇರ್‌ಮ್ಯಾನ್ ಆಗಿರುವ ರೊ. ಸತ್ಯನಾರಾಯಣ ಪುರಾಣಿಕ್‌ರವರು ನಮ್ಮ ಸದಸ್ಯರಿಂದ ಈಗಾಗಲೇ TRFಗಾಗಿ ಸಂಗ್ರಹಿಸಿದ 5000/– ಡಾಲರ್ ಮೊತ್ತದ ಚೆಕ್ಕನ್ನು ಹಿರಿಯ ಸದಸ್ಯರಾದ ರೊ. ಜಿ. ಶ್ರೀಧರ್ ಶೆಟ್ಟಿಯವರು Dist. Governorನವರಿಗೆ ಹಸ್ತಾಂತರಿಸಿದಾಗ DGಯವರು, ನೀವು ಇನ್ನೂ ಸ್ವಲ್ಪ ಪ್ರಯತ್ನಿಸಿ 1,000/– ಡಾಲರ್ ಸಂಗ್ರಹಿಸಿದ್ದಲ್ಲಿ ಪ್ರತೀ ಸದಸ್ಯರಿಂದ 100/– ಡಾಲರಿನ ಸಾಧ್ಯತೆ ಸಾಧ್ಯವಾಗುವುದಲ್ಲದೇ ನಿಮ್ಮ ಕ್ಲಬ್ TRF ದೇಣಿಗೆಯಲ್ಲಿ Dist.ನ ಮುಂಚೂಣಿಯ ಕ್ಲಬ್ ಆಗುವ ಸಾಧ್ಯತೆ ಇದೆಯೆಂದು ಕರೆ ನೀಡಿದರು.

ಕಾರ್ಯಕ್ರಮಕ್ಕೆ ಶುಭ ಕೋರಿದ Zonal Lieutenant ರೊ. ಮಹೇಂದ್ರ ಶೆಟ್ಟಿಯವರು "ಮಹಿಳೆಯರು ಕ್ಲಬ್ಬಿನ ಅಧ್ಯಕ್ಷರಾದಾಗ ಕ್ಲಬ್‌ಗಳು ಬಲಿಷ್ಟಗೊಳ್ಳುವುದು ನಮ್ಮ ಕ್ಲಬ್ಬಿನಲ್ಲಿ ಸಾಧ್ಯವಾಗಿರುವುದರಿಂದ ಪ್ರತೀ ಕ್ಲಬ್‌ಗಳಲ್ಲಿ ಮಹಿಳಾ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಎಲ್ಲಾ ಕ್ಲಬ್‌ಗಳಿಗೆ ಕರೆ ನೀಡಿದರು. ಈ ಸಾಲಿನ ಅರ್ಧ ವಾರ್ಷಿಕ ವರದಿಯನ್ನು ಒಳಗೊಂಡ ನಮ್ಮ ಸುಂದರ ಸಾಪ್ತಾಹಿಕ "ಜಾಸ್ಮಿನ್" ಪತ್ರಿಕೆಯ ಈ ಸಾಲಿನ 2ನೇ Special Bulletinನನ್ನು ಬಿಡುಗಡೆಗೊಳಿಸಿದ Asst. Governor ರೊ. ಡಾ. ಬಿ. ಆರ್. ಶೆಟ್ಟಿಯವರು ಈ ವರ್ಷ ನಮ್ಮ ಕ್ಲಬ್ಬಿನಿಂದಾದ ಹಲವು ಸಾಧನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿ ಅಧ್ಯಕ್ಷರನ್ನು ಅಭಿನಂದಿಸಿದರು. ಈ ಸಭೆಯಲ್ಲಿ Dist. Gov. Rtn. PHF. ದೇವ್ ಆನಂದ್‌ರವರನ್ನು ವಿನೂತನವಾಗಿ ಒಂದು ಹಾಡಿನ ಮೂಲಕ ಸಭೆಗೆ ಪರಿಚಯಿಸಲಾಯಿತು. ಇದನ್ನು ರೊ. ವಿವಿಯನ್ ಕ್ರಾಸ್ಟೋರವರು ಕುಂದಾಪ್ರ ಕನ್ನಡದ ಶೈಲಿಯಲ್ಲಿ ಬರೆದು, ರಾಗ ಸಂಯೋಜಿಸಿ, ತಮ್ಮ ತಂಡದೊಂದಿಗೆ ಹಾಡಿದ್ದು, ಸಭೆಯಲ್ಲಿ ಸಂಚಲನ ಮೂಡಿಸಿತ್ತು. ರೊ. ವಿವಿಯನ್ ಕ್ರಾಸ್ಟೋರವರೊಂದಿಗೆ ರೊ. ಪ್ರಕಾಶ್ ಲೋಬೋರವರು ಧ್ವನಿಗೂಡಿಸಿದ್ದು, ರೊ. ಜಾನ್ಸನ್ ಅಲ್ಮೇಡಾರವರು ಮತ್ತು ರೊ. ಜೆರಾಲ್ಡ್ ಕ್ರಾಸ್ಟೋರವರು ನಟಿಸಿದ್ದು, ಸಭೆಗೆ ಕಳೆ ತಂದಿತ್ತು. ಈ ಹಾಡಿಗೆ ವೈದ್ಯಕೀಯ ವಿದ್ಯಾರ್ಥಿ ಶ್ರೀ ಎಲ್ಮನ್ ಘುರ್ಟಾಡೋರವರು ಸಂಗೀತ ನೀಡಿದ್ದು, ಆ್ಯನ್ ಪ್ರಾಂಜಲ್ ಲೋಬೋ ಹಾಗೂ ರೊಟರ್‍ಯಾಕ್ಟರ್ ಆಲ್ಡ್ರೀನ್ ಡಿ'ಸೋಜಾರವರು ಹಿಮ್ಮೇಳದಲ್ಲಿ ಸಹಕರಿಸಿದ್ದು, ಸಭೆಯಲ್ಲಿ ಪ್ರಶಂಸೆಗೆ ಪಾತ್ರವಾಯಿತು.

ನಂತರ ತಮ್ಮ ಅಧ್ಯಕ್ಷೀಯ ಭಾಷಣವನ್ನು ಮಾಡಿದ Dist. Gov. Rtn. PHF. ದೇವ್ ಆನಂದ್‌ರವರು ನಮ್ಮ ಕ್ಲಬ್ ಬೆಳಗಿನಿಂದ ಮಾಡಿದ ಕಾರ್ಯಗಳು ಮತ್ತು ಕಳೆದ 6 ತಿಂಗಳಿನಿಂದ ಮಾಡಿದ ಕಾರ್ಯಗಳ ಬಗ್ಗೆ ಹಾಗೂ TRFಗೆ ದೇಣಿಗೆ ನೀಡಿದ ಬಗ್ಗೆ ಅತೀವ ಸಂತಸವನ್ನು ವ್ಯಕ್ತ ಪಡಿಸಿದರು. ಈ ಸಭೆಯಲ್ಲಿ ಸನ್ಮಾನಿಸಲ್ಪಟ್ಟ ಸಾಧಕರಿಗೆ ಶುಭಕೋರಿದ ಅವರು ಇದೇ ರೀತಿ ಸಮಾಜದ ಅಭ್ಯುದಯಕ್ಕೆ ಶ್ರಮಿಸಿದ ಸಾಧಕರನ್ನು ಗುರುತಿಸಿದಲ್ಲಿ ಅವರಿಗೂ ತಮ್ಮ ಶ್ರಮ ಸಮಾಜಕ್ಕೆ ಮುಟ್ಟಿದೆ ಎನ್ನುವ ಸಾರ್ಥಕತೆ ಬರುವುದಲ್ಲದೇ ರೋಟರಿಯ Image ಕೂಡಾ ಹೆಚ್ಚುತ್ತದೆ ಎಂದರು. ಈ ವರ್ಷದಲ್ಲಿ ತಾನು ಈಗಾಗಲೇ ಸುಮಾರು 40 ಕ್ಲಬ್‌ಗಳಿಗೆ ಅಧಿಕೃತ ಭೇಟಿಯನ್ನು ನೀಡಿದ್ದು, ಇಂದಿನ ಕಾರ್ಯಕ್ರಮ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯಲಿದೆ ಎಂದು

ಮನದುಂಬಿ ನುಡಿದರು. ನಂತರ ಅಧ್ಯಕ್ಷೀಯ ಭಾಷಣ ಮಾಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಈ ವರ್ಷ ಮಾಡಿದ ನೂರಾರು ಕಾರ್ಯಕ್ರಮಗಳಲ್ಲಿ ಪುಟ್ಟ ಮಕ್ಕಳಿಗೆ ಪ್ರೋಟೀನ್ ಪೌಡರ್ ವಿತರಿಸಿ, ಅವರ ಬೆಳವಣಿಗೆಯಲ್ಲಿ ಏರಿಕೆಯನ್ನು ನೋಡಿದ್ದು, ವಸತಿಹೀನ ಮಹಿಳೆಗೆ ಒಂದು ಮನೆಯನ್ನು ಕಟ್ಟಿಸಿಕೊಡಲು ಸಾಧ್ಯವಾಗಿದ್ದು, ಸಾರಿಗೆ ವ್ಯವಸ್ಥೆಗೆ ಸಿ. ಸಿ. ಕ್ಯಾಮರಾಗಳನ್ನು ನೀಡಿ ಕುಂದಾಪುರದ ಅಭ್ಯುದಯಕ್ಕೆ ಸಹಕಾರಿಯಾಗಲು ಸಾಧ್ಯವಾಗಿದ್ದು, ಗ್ರಾಮೀಣ ಮಹಿಳೆಯರಿಗಾಗಿ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಉಚಿತವಾಗಿ ನಡೆಸಿದ್ದು ಹಾಗೂ ಕ್ಲಬ್ಬಿನಲ್ಲಿ ಬಾಂಧವ್ಯವನ್ನು ಹೆಚ್ಚಿಸುವ ಕುಟುಂಬ ಸಮ್ಮಿಲನಗಳನ್ನು ನಡೆಸಲು ಸಾಧ್ಯವಾಗಿದ್ದು, ತುಂಬಾ ಆತ್ಮತೃಪ್ತಿಯನ್ನು ನೀಡಿದ್ದು ಇದಕ್ಕೆ ಸಹಕರಿಸಿದ ಎಲ್ಲಾ ಸದಸ್ಯರಿಗೂ ತಮ್ಮ ನಮನಗಳನ್ನು ತಿಳಿಸಿದರು. ನಮ್ಮ ಆಮಂತ್ರಣದ ಮೇರೆಗೆ ಆಗಮಿಸಿದ ಎಲ್ಲಾ ಅತಿಥಿಗಳನ್ನು ರೊ. ಸಚಿನ್ ನಕ್ಕತ್ತಾಯರವರು ಗುರುತಿಸಿ ಗೌರವಿಸಿದರು. ಕಾರ್ಯಕ್ರಮದ ಸ್ಟೇಜ್ ನಿರ್ವಹಣೆಯನ್ನು ರೊ. ಡಾ. ಅನುಲೇಖ ಬಾಯರಿ ಮತ್ತು ಆ್ಯನೆಟ್ ಆರಾಧ್ಯರವರು ನಿರ್ವಹಿಸಿದರು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ವಂದನಾರ್ಪಣೆಗೈದರು. ರುಚಿಕರವಾದ ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.









ತಾ. 12–12–2024ರಂದು ನಮ್ಮ ಕ್ಲಬ್ಬಿಗೆ Dist. Gov. Rtn. PHF. ದೇವ್ ಆನಂದ್‌ರವರ ಅಧಿಕೃತ ಭೇಟಿಯ ಸಂದರ್ಭವಾಗಿದ್ದು, ನಮ್ಮ ಅರ್ಧ ವಾರ್ಷಿಕದಲ್ಲಿ ನಡೆದ ಕಾರ್ಯಕ್ರಮಗಳ ಮೌಲ್ಯಮಾಪನ ನಡೆಸಲು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಆಗಮಿಸಿದ Dist. Gov. Rtn. PHF. ದೇವ್ ಆನಂದ್ ದಂಪತಿಗಳನ್ನು ಹೋಟೆಲ್ ಶಿವಪ್ರಸಾದ್ ಗ್ರ್ಯಾಂಡ್‌ನ ಮುಖ್ಯದ್ವಾರದಲ್ಲಿ ನಮ್ಮ ಅಧ್ಯಕ್ಷರು ಮತ್ತು ಸದಸ್ಯರು ಹೂಗುಚ್ಛಗಳನ್ನು ನೀಡಿ ಸ್ವಾಗತಿಸಿದರು. ನಂತರ Dist. Project Make Road Safetyಯ ಭಾಗವಾಗಿ ಕುಂದಾಪುರ ಸಂಚಾರಿ ಪೋಲೀಸರ ಬೇಡಿಕೆಯಂತೆ ರೂ. 1,50,000/– ಮೌಲ್ಯದ 3 ಸೌರ ಶಕ್ತಿ ಚಾಲಿತ ಸಿ.ಸಿ. ಕ್ಯಾಮರಾಗಳನ್ನು ಕುಂದಾಪುರದ ಶಾಸ್ತ್ರಿ ಸರ್ಕಲ್, ಸಂಗಮ್ ಜಂಕ್ಷನ್ ಹಾಗೂ ತಲ್ಲೂರಿನ ಹೃದಯಭಾಗದಲ್ಲಿ ಅಳವಡಿಸಲಾಯಿತು. ಈ ಸಂದರ್ಭದಲ್ಲಿ ಟ್ರಾಫಿಕ್ ಸಬ್‌ಇನ್‌ಸ್ಪೆಕ್ಟರ್ ಶ್ರೀ ಪ್ರಸಾದ್ ಮತ್ತು ಸಾರ್ವಜನಿಕರು ಹಾಜರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ Dist. Gov. Rtn. PHF. ದೇವ್ ಆನಂದ್‌ರವರು "ಈ ಸಿ. ಸಿ. ಕ್ಯಾಮರಾಗಳನ್ನು ಅಳವಡಿಸಿರುವುದರಿಂದ ಕುಂದಾಪುರದ ಹಾಗೂ ರಾಷ್ಟ್ರೀಯ ಹೆದ್ದಾರಿಯ ಸಂಚಾರ ವ್ಯವಸ್ಥೆ ಸುಗಮವಾಗಿ ನಡೆಯಲು ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಸಹಕರಿಸಿರುವುದು ರೋಟರಿಯ ಈ ವರ್ಷದ ಮುಖ್ಯಸ್ಥನಾಗಿ ನನಗೆ ತುಂಬಾ ಹೆಮ್ಮೆಯೆನಿಸುತ್ತಿದೆ" ಎಂದರು. ನಂತರ ತಲ್ಲೂರು ಗ್ರಾಮದ ಬಡ ಮಹಿಳೆ ಶ್ರೀಮತಿ ಮೂಕಾಂಬಿಕಾ ದೇವಾಡಿಗರವರ ಸಣ್ಣ ಗುಡಿಸಲು ಮಳೆಗಾಲದಲ್ಲಿ ಸಂಪೂರ್ಣ ನಾಶವಾದುದರಿಂದ ಅವರ ಮನವಿಯ ಮೇರೆಗೆ ನಮ್ಮ ಅಧ್ಯಕ್ಷರು ತಲ್ಲೂರಿನ ತಮ್ಮ ಕುಟುಂಬದ ಹಿತೈಷಿ ಹಾಗೂ ಅನಿವಾಸಿ ಉದ್ಯಮಿಯಾಗಿರುವ ಶ್ರೀ ಪ್ರತಾಪ್ ಮೆಂಡೋನ್ಸಾರವರ ಮನ ಒಲಿಸಿ ಸುಮಾರು 6 ಲಕ್ಷ ಮೌಲ್ಯದ ಹೊಸ ಮನೆ ಕಟ್ಟಿಸಿ ಅದನ್ನು ಊರ ಮಹನೀಯರ ಮತ್ತು ನಮ್ಮ ಸದಸ್ಯರ ಸಮ್ಮುಖದಲ್ಲಿ Dist. Gov. Rtn. PHF. ದೇವ್ ಆನಂದ್‌ರವರು ಉದ್ಘಾಟಿಸಿ, ಶ್ರೀಮತಿ ಮೂಕಾಂಬಿಕಾ ದೇವಾಡಿಗರಿಗೆ ಒಪ್ಪಿಸಲಾಯಿತು. ಈ ಸಂದರ್ಭ ಮಾತನಾಡಿ ರವರು "ನಿರ್ಗತಿಕಳಾಗಿ ಬಾಳನ್ನು ಸಾಗಿಸುತ್ತಿದ್ದ ಬಡ ಮಹಿಳೆಗೆ ಮಳೆಗಾಲದಲ್ಲಿ ಆಶ್ರಯ ಕೊಡುತ್ತಿದ್ದ ಮನೆಯೇ ಸಂಪೂರ್ಣವಾಗಿ ನಾಶವಾಗಿ



ಜೀವನದ ಆಸೆಯೇ ಕಮರಿಹೋದಾಗ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಆಸರೆಯಾಗಿ ಉದ್ಯಮಿಗಳಿಂದ ಹೊಸ ಮನೆಯನ್ನು ಕಟ್ಟಿಸಿಕೊಟ್ಟಿದ್ದು ಅಭಿಮಾನ ತಂದಿದೆ" ಎಂದರು. ಈ ಸಮಾರಂಭದಲ್ಲಿ ಅಸಿಸ್ಟೆಂಟ್ ಗವರ್ನರ್ ರೊ. ಡಾ. ಬಿ. ಆರ್. ಶೆಟ್ಟಿ ಹಾಗೂ ಜೋನ್ ಲೆಫ್ಟಿನೆಂಟ್ ರೊ. ಮಹೇಂದ್ರ ಶೆಟ್ಟಿಯವರೊಂದಿಗೆ ರೋಟರಿ ಸದಸ್ಯರು ಭಾಗವಹಿಸಿದ್ದು, ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರ ಧನ್ಯವಾದದೊಂದಿಗೆ ಪೂರ್ವಾಹ್ನದ ಕಾರ್ಯಕ್ರಮಗಳನ್ನು ಕೊನೆಗೊಳಿಸಲಾಯಿತು.





ಸಂಜೆ 4.00 ಘಂಟೆಗೆ ಹೋಟೆಲ್ ಶಿವಪ್ರಸಾದ್‌ನ ಸಭಾಂಗಣಕ್ಕೆ ಆಗಮಿಸಿದ Dist. Gov. Rtn. PHF. ದೇವ್ ಆನಂದ್‌ರವರು ನಮ್ಮ ಅಧ್ಯಕ್ಷ, ಕಾರ್ಯದರ್ಶಿಯೊಂದಿಗೆ ಮತ್ತು ಮುಂದಿನ ಸಾಲಿನ ನಿಯೋಜಿತ ಅಧ್ಯಕ್ಷ, ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ರೊ. ಸಚಿನ್ ನಕ್ಕತ್ತಾಯ ಮತ್ತು ರೊ. ಜೆರಾಲ್ಡ್ ಕ್ರಾಸ್ಟೋರವರೊಂದಿಗೆ ಮುಂದಿನ ವರ್ಷ ಕ್ಲಬ್ಬನ್ನು ಸಾಂಗವಾಗಿ ನಡೆಸುವ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ಪ್ರತ್ಯೇಕವಾಗಿ ನೀಡಿದರು. ತರುವಾಯ ನಡೆದ ಕ್ಲಬ್ ಅಸೆಂಬ್ಲಿಯಲ್ಲಿ ನಮ್ಮ ಕ್ಲಬ್ಬಿನ ಎಲ್ಲಾ ಹಿರಿಯ ಸದಸ್ಯರನ್ನು ಹಿಂದಿನ ಕಾಲದೊಂದಿಗೆ ನೆನಪಿಸಿಕೊಂಡು ಎಲ್ಲ ಸದಸ್ಯರೊಂದಿಗೆ ಸಂವಾದವನ್ನು ನಡೆಸಿದರು. ಕ್ಲಬ್ಬಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಮೆಚ್ಚುಗೆಯನ್ನು ಸೂಚಿಸಿದರು. ಕಳೆದ 5½ ತಿಂಗಳುಗಳಲ್ಲಿ ನಡೆಸಿದ ಕಾರ್ಯಕ್ರಮಗಳ ಬಗ್ಗೆ ಆಯಾ



Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95

ಡೈರೆಕ್ಟರ್‌ಗಳು ಅವರಿಗೆ ವಿಶದವಾಗಿ ವಿವರಿಸಿದರು. ಕಾರ್ಯಕ್ರಮಗಳ ಬಗ್ಗೆ ಅತೀವ ಸಂತಸ ವ್ಯಕ್ತಪಡಿಸಿದ ಅವರು "ಇದೇ ವೇಗದಲ್ಲಿ ನೀವು ಮುಂದುವರಿದಲ್ಲಿ ಈ ವರ್ಷದ ಕೊನೆಯಲ್ಲಿ 365 ಕಾರ್ಯಕ್ರಮಗಳನ್ನು ಕ್ರಮಿಸಬಹುದು. ಅಂದರೆ ಪ್ರತೀ ದಿನ ಒಂದು ಕಾರ್ಯಕ್ರಮ ಎನ್ನುವ ದಾಖಲೆಯನ್ನು ಮುಟ್ಟಬಹುದು. ಅದಕ್ಕೆ ಪ್ರಯತ್ನಿಸಿ" ಎಂದು ಕಠಿಣವಾದ ಗುರಿಯನ್ನು ನೀಡಿದರು. ಎಲ್ಲಾ ಸದಸ್ಯರೊಂದಿಗೆ ಒಬ್ಬ ಗೆಳೆಯನಂತೆ ಮಾತನಾಡಿದ ಅವರು ಇಂದು ಕ್ಲಬ್ ಅಸೆಂಬ್ಲಿಯಲ್ಲಿ 40ಕ್ಕೂ ಅಧಿಕ ಸದಸ್ಯರು ಭಾಗವಾಗಿರುವುದು ನಿಮ್ಮಲ್ಲಿರುವ ಒಗ್ಗಟ್ಟಿಗೆ ಸಾಕ್ಷಿ ಎಂದರಲ್ಲದೇ ಅಧ್ಯಕ್ಷರ ಕ್ರಿಯಾಶೀಲತೆ ಮತ್ತು ಬದ್ಧತೆಯ ಬಗ್ಗೆ ತುಂಬಾ ಸಂತಸವನ್ನು ವ್ಯಕ್ತಪಡಿಸಿದರು. ವೇದಿಕೆಯಲ್ಲಿದ್ದ ಅಸಿಸ್ಟೆಂಟ್ ಗವರ್ನರ್ ರೊ. ಡಾ. ಬಿ. ಆರ್. ಶೆಟ್ಟಿಯವರು ಮಾತನಾಡುತ್ತಾ, ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ನಮ್ಮ ವಲಯದಲ್ಲಿ ಎಲ್ಲಾ ಕಾರ್ಯಕ್ರಮಗಳಗಳಲ್ಲೂ ಮುಂಚೂಣಿಯಲ್ಲಿದೆ ಎಂದು ಪ್ರಶಂಸಿಸಿದರು. Zonal Lieutenant ರೊ. ಮಹೇಂದ್ರ ಶೆಟ್ಟಿಯವರು ಮಾತನಾಡುತ್ತಾ, ನಮ್ಮ ಅಧ್ಯಕ್ಷರು ಒಬ್ಬ ಮಹಿಳೆಯಾಗಿದ್ದೂ ಕೂಡಾ ಎಲ್ಲಾ ಸದಸ್ಯರು ಅವರಿಗೆ ಕೊಡುವ ಸಹಕಾರ ಎಲ್ಲಾ ಕ್ಲಬ್‌ಗಳಿಗೆ ಮಾದರಿ ಎಂದು ಅಭಿಪ್ರಾಯಪಟ್ಟರು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರ ಧನ್ಯವಾದದೊಂದಿಗೆ ಕ್ಲಬ್ ಅಸೆಂಬ್ಲಿಯನ್ನು ಸಮಾಪ್ತಿಗೊಳಿಸಿದರು.

**Pope Francis:** "A little bit of mercy makes the world less cold and more just." - Aligns with Rotary's mission to foster understanding, goodwill, and peace.

## ಹುಟ್ಟುಹಬ್ಬದ ಶುಭಾಶಯಗಳು



**ರೊ. ವಿನಾಯಕ ಪೈ**
ದಿನಾಂಕ : ಡಿಸೆಂಬರ್ 22
ಮೊಬೈಲ್ : 9448770432

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 25–12–2024ನೇ ಬುಧವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ರಾಘವೇಂದ್ರ ಶೇಟ್ ಮತ್ತು ಆ್ಯನ್ ತೇಜಾರವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊ. : 9480266845

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com


Rtn. K. T. Surendranath
1995-96


Rtn. S. Sadananda Chatra
1996-97


Rtn. B. C. Somayaji
1997-98


Rtn. K. Suresh Kamath
1998-99


Rtn. S. Subraya Halambi
1999-2000


Rtn. S. Vijaya Shetty
2000-01


Rtn. K. Seetharama Nackathaya
2001-02


Rtn. U. S. Shenoy
2002-03


Rtn. Dr. Umesh Puthran
2003-04


Rtn. Dr. B. V. Udupa
2004-05


Rtn. A. Shantharam Pai
2005-06


Rtn. K. Shantharam Prabhu
2006-07


Rtn. T. Raghavendra Hatwar
2007-08



Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15



Rtn. P. Vasudeva Karanth
2015-16


Rtn. Aouzline F. Rebello
2016-17



Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24

*This Bulletin is sponsored by :*
Rtn. Dr. S. G. Prasanna Aithal
Mob. : 9632171955

For Private Circulation only